6

# ಭವಿಷ್ಯತ್ತಿನ ಸಂತೈಸುವಿಕೆ

## (ಯೋಹಾನ 14)

*"ಈ ಮಾತುಗಳನ್ನು ನಾನು ಇನ್ನೂ ನಿಮ್ಮ ಬಳಿಯಲ್ಲಿರುವಾಗ ನಿಮಗೆ ಹೇಳಿದ್ದೇನೆ. ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು. ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ. ನಾನು ಹೋಗಿ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆಂದು ನಿಮಗೆ ಹೇಳಿದ್ದನ್ನು ಕೇಳಿದಿರಿ. ನೀವು ನನ್ನನ್ನು ಪ್ರೀತಿಸುವವರಾಗಿದ್ದರೆ ನಾನು ತಂದೆಯ ಬಳಿಗೆ ಹೋಗುವ ವಿಷಯದಲ್ಲಿ ಸಂತೋಷಪಡುತ್ತಿದ್ದೀರಿ; ಯಾಕಂದರೆ ತಂದೆಯು ನನಗಿಂತ ದೊಡ್ಡವನು. ಅದೆಲ್ಲಾ ನಡೆಯುವಾಗ ನೀವು ನನ್ನನ್ನು ನಂಬುವಂತೆ ಅದು ನೆಯುವದಕ್ಕಿಂತ ಮುಂಚೆಯೇ ಈಗ ನಿಮಗೆ ಹೇಳಿದ್ದೇನೆ ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳನ್ನಾಡುವದಿಲ್ಲ, ಯಾಕಂದರೆ ಇಹಲೋಕಾಧಿಪತಿಯು ಬರುತ್ತಾನೆ. ಅವನಿಗೆ ಸಮ್ಮಂಧಪಟ್ಟದ್ದು ಯಾವದೊಂದೂ ನನ್ನಲ್ಲಿಲ್ಲ; ಆದರೂ ನಾನು ತಂದೆಯನ್ನು ಪ್ರೀತಿಸುತ್ತೇನೆಂಬದು ಲೋಕಕ್ಕೆ ತಿಳಿದಿರಬೇಕೆಂದು ತಂದೆಯು ನನಗೆ ಕೊಟ್ಟ ಆಜ್ಞೆಯ ಮೇರೆಗೆ ಇದನ್ನು ಮಾಡತ್ತೇನೆ. ಏಳಿರಿ, ಇಲ್ಲಿಂದ ಹೋಗೋಣ"*
*(ಯೋಹಾನ 25-31).*

ಯೇಸು ಕ್ರೂಜಿತನಾಗುವ ಮೊದಲು ಮೇಲುಪ್ಪರಿಗೆಯಲ್ಲಿ ಗುರುವಾರ ರಾತ್ರಿ ಮಾತನಾಡಿ ತನ್ನ ಅಪೊಸ್ತಲರು ಎದುರಿಸಲಿರುವ ಸಂಕಷ್ಟವನ್ನು ಸಹಿಸುವಂತೆ ಅವರನ್ನು ಸಂತೈಸಿದನು. ಆತನ ಸಂಭಾಷಣೆಯು ಮಹತ್ವವುಳ್ಳದ್ದಾಗಿ, ಅವರ ಜೀವಿತದಲ್ಲಿ ಮರೆಯಲಾರದ ಸಂಗತಿಯಾಗಿತ್ತು. ಆತನು ಅವರೊಂದಿಗೆ ಇದ್ದ "ಇರುವಿಕೆನ್ನು" ನಾವುಗಳು ನಮ್ಮ ಜೀವಿತಕ್ಕೆ ಹೇಗೆ ಅಳವಡಿಸಿಕೊಳ್ಳಬಹುದು (14:25)! ಈ ದಿನಗಳಲ್ಲಿ ನಾವುಗಳು ಎದುರಿಸಲಿರುವ ಸಂಗತಿಗಳಿಗೆ ಆ ಮಾತುಗಳು ಸಮಂಜಸವಾದ ಬೆಳಕಾಗಿದೆ. ಅದರ ಮುಖಾಂತರ ನಾವುಗಳು ನಾಳೆಯನ್ನು ಕಾಣಲು ಸಾಧ್ಯವಿದೆ.

### ಪವಿತ್ರಾತ್ಮನ ನಾಯಕತ್ವ

ಅಪೊಸ್ತಲರ ಕೃತ್ಯಗಳಿಗೆ ನಾಯಕತ್ವದ ಅಗತ್ಯತೆಯಿತ್ತು. ಅದಕ್ಕಾಗಿ ತಂದೆಯು ತನ್ನ ಸಂತೈಸುವ ಆತ್ಮನನ್ನು ಅವರ ಸಹಾಯಕ್ಕಾಗಿ ಕಳುಹಿಸಿದ್ದನು. ಇದು ಹೊಸ ಒಡಂಬಡಿಕೆಯಲ್ಲಿ ಪ್ರಮುಖವಾದ ಪವಿತ್ರಾತ್ಮನ ವಾಗ್ದಾನವಾಗಿದೆ. ಪವಿತ್ರಾತ್ಮನು ಮಾಡುವ ಕಾರ್ಯದ ಸಂಕ್ಷಿಪ್ತ ವರದಿಯಾಗಿದೆ. ಯೇಸು ಹೇಳಿದಂತೆ, "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (14:26). ತಂದೆಯು ಆ ಸಹಾಯಕನನ್ನು ಯೇಸುವಿನ ಹೆಸರಿನಲ್ಲಿ ಕಳುಹಿಸುವದಕ್ಕಿದ್ದನು. ಕ್ರಿಸ್ತನನ್ನು ಮಹಿಮೆ ಪಡಿಸುವದು ಆತ್ಮನ ಉದ್ದೇಶವಾಗಿತ್ತು. ಆತನು ಅಪೊಸ್ತಲರಿಗೆ ಎರಡು ವಿಧವಾದ ಸಹಾಯ ಮಾಡಲಿದ್ದನು.

ಅವರಿಗೆ "ಎಲ್ಲವನ್ನು ಪ್ರಕಟನೆಯ ಮೂಲಕ ಬೋಧಿಸುವದು ಹಾಗೂ ಯೇಸುವಿನ ಮಾತುಗಳನ್ನು ನೆನಪಿಸುವದು." ಕ್ರಿಸ್ತನು ನಿರ್ಮಿಸಿ ಬುನಾದಿಯ ಮೇಲೆ ಅಪೊಸ್ತಲರನ್ನು ಕಟ್ಟುವದು ಆತ್ಮನ ಕೆಲಸವಾಗಿತ್ತು.

ಪವಿತ್ರಾತ್ಮನ ಬರೋಣವು ನಮಗೂ ಸಹ ಸಮಂಜಸವಾಗಿದೆ. ಅಪೊಸ್ತಲರ ಹಾಗೂ ಪ್ರೇಲಿತರಾದವರ ಮುಖಾಂತರ ಪವಿತ್ರಾತ್ಮನು ನಮಗೆ ವಾಕ್ಯವನ್ನು ದಯಪಾಲಿಸಿರುವನು. ಪಂಚಾಶತ್ತಮ ದಿನದಂದು ಅಪೊಸ್ತಲರು ಪರಲೋಕದಿಂದ ಪವಿತ್ರಾತ್ಮನ ಅಭಿಷೇಕವನ್ನು ಹೊಂದಿದರು. ಈ ಅಭಿಷೇಕವು ಅವರನ್ನು ಆತ್ಮನಿಂದ ಬಲಪಡಿಸಿದಾಗ, ಅಪೊಸ್ತಲರು ಲೋಕಕ್ಕೆ ದೇವರ ವಾಕ್ಯವನ್ನು ಪ್ರಕಟಿಸಿದರು. ಹಾಗೂ ವರ್ಗಾಯಿಸಿದರು, ಹಾಗೂ ಸೂಚಕ ಕಾರ್ಯಗಳನ್ನು ದೃಢಪಡಿಸಿದರು. ಅಪೊಸ್ತಲರೊಂದಿಗೆ ಆತ್ಮನ ಇರುವಿಕೆಯ ಹಾಗೆ, ಆತನು ನಮ್ಮಲ್ಲಿಯೂ ಇದ್ದು ನಮಗೆ ಶಕ್ತಿ ಹಾಗೂ ಆತನ ಪ್ರಕಟನಾ ವಾಕ್ಯದ ಸತ್ಯವೂ ಆಗಿರುವನು.

## ಸಮಾಧಾನಕರವಾದ ಶಾಂತಿ

ಅವರು ಒಂದು ಕತ್ತಲಾದ ಭವಿಷ್ಯವನ್ನು ಎದುರಿಸುವ ಸಂದರ್ಭದಲ್ಲಿ, ಅಪೊಸ್ತಲರು ತಮ್ಮ ಹೃದಯಕ್ಕೆ ಸಮಾಧಾನವನ್ನು ತಂದುಕೊಂಡರು. ಯೇಸು ಅವರಿಗೆ, "ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ" (14:27ಎ). ಗೊಂದಲದ ನಡುವೆ ಉಂಟಾಗುವ ಸಮಾಧಾನದಲ್ಲಿ ದೃಢತೆ ಹಾಗೂ ನಿಶ್ಚಲತ್ವವಿರುತ್ತದೆ. ದೃಢತೆಯನ್ನು ನೀಡದೆ ಯೇಸು ಅವರನ್ನು ಬಿಟ್ಟುಹೋಗಲಿಲ್ಲ. ಆತನು ಬಿಟ್ಟು ಹೋದಂಥ ಸಮಾಧಾನ, ಸತ್ಯದ ಸಮಾಧಾನವಾಗಿತ್ತು. ತಾನು ಅವರನ್ನು ಬಿಟ್ಟು ಹೋಗುವ ಮೊದಲು ಈ ಸಮಾಧಾನವನ್ನು ಮಾತ್ರವಲ್ಲದೆ, ತನ್ನ ಪ್ರಸನ್ನತೆಯನ್ನು ಸಹ ಬಿಟ್ಟು ಹೋದನು. "ನಾನು ಹೋಗಿ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆಂದು ನಿಮಗೆ ಹೇಳಿದ್ದನ್ನು ಕೇಳದಿರಿ" (14:28ಎ). ಅವರು ಶೀರ್ಘದಲ್ಲಿಯೇ ಕ್ರಿಸ್ತನು ಆತ್ಮೀಕವಾದ ಪ್ರಸನ್ನತೆಯನ್ನು ಹೊಂದಿದವನು ಎಂದು ಅರಿಯುವದಕ್ಕಿದ್ದರು. ನಂತರದಲ್ಲಿ ಆತನು ಅವರೊಂದಿಗೆ ಹೊಸದಾದ ರೀತಿಯಲ್ಲಿ ಇರುವನೆಂದು ಸಹ ತಿಳಿದಿದ್ದರು.

ಆತನು ಬಿಟ್ಟು ಹೋಗಲಿದ್ದ ಹಾಗು ಆತನು ನೀಡಲಿದ್ದ ಸಮಾಧಾನವು ಲೋಕವು ನೀಡುವಂಥ ಸಮಾಧಾನವಾಗಿರಲಿಲ್ಲ. ಲೋಕವು ಅಪಾಯ ಹಾಗೂ ಸಮಸ್ಯೆಗಳಿಗೆ ಕೆಲವು ಸಮಾಧಾನಕರವಾದ ಉತ್ತರವನ್ನು ನೀಡಬಹುದಾದರೂ - ಅದು ದೇವರು ನೀಡುವ ಸಮಾಧಾನಕ್ಕೆ ಸಮಾನವಾಗಲಾರದು. ಆ ವಿಧವಾದ ಸಮಾಧಾನವು ತಾತ್ಕಾಲಿಕವಷ್ಟೆ. ಅಪೊಸ್ತಲರ ಸಂಕಟಗಳ ನಡುವೆಯೂ, ಯೇಸುವಿನ ಸಮಾಧಾನ ಕಾರ್ಯಪವೃತ್ತವಾಗುತ್ತಿತ್ತು.

ಜನ ಈಗಲೂ ಯೇಸು ಜನರಿಗೆ ಸಮಾಧಾನವನ್ನು ನೀಡುತ್ತಾನೆ. ತನ್ನ ಅನುಯಾಯಿಗಳಿಗೆ ತನ್ನ ಸಮಾಧಾನವನ್ನು ಅನುಗ್ರಹಿಸುತ್ತಾನೆ. ನಾವುಗಳು ನಂಬಿಕೆ ಹಾಗೂ ವಿಧೇಯತೆಯಿಂದ ಆತನ ಬಳಿಗೆ ಬರುವಾಗ ನಮಗೆ ಅದು ದೊರೆಯುತ್ತದೆ ಮತ್ತು ಸಂಕಷ್ಟಗಳಿಗೆ ಒಳಗಾಗುವಾಗ ತನ್ನ ಪ್ರಸನ್ನತೆಯ ಮೂಲಕ ಸಮಾಧಾನವನ್ನು ನೀಡುತ್ತಾನೆ. ಯೇಸುವಿನ ದೈಹಿಕವಾದ ಸಾನಿಧ್ಯವಿಲ್ಲದ ಭವಿಷ್ಯವನ್ನು ಅಪೊಸ್ತಲರು ಎದುರಿಸಬೇಕಿತ್ತು. ಈ ಪರಿಸ್ಥಿತಿಯಲ್ಲಿ ಅವರು ದಿಗ್ಭ್ರಾಂತರಾದರು; ಅವರ ಯೋಜನೆಗಳು ನಿರರ್ಥಕವಾದವು ಎಂದು ತಿಳಿದರು. ಆಗ ಅವರ ಗೊಂದಲಕ್ಕೊಳಗಾದ ಹೃದಯಗಳು ಸಾಮಾಧಾನಕ್ಕಾಗಿ ಮೊರೆಯುವಾಗ, ಯೇಸು ಅದನ್ನು ಅವರಿಗೆ ನೀಡಿ ದನು. ಆಗ ಆತನು, "ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ" (14:27ಬಿ) ಅಂದನು. ಹೌದು ನಾನು ನಿಮ್ಮ ಭವಿಷ್ಯವನ್ನು

ಬಲ್ಲೆನು, ನಾನೇ ನಮ್ಮನ್ನು ನಡೆಸುತ್ತೇನೆ ಎಂಬ ಅರ್ಥವನ್ನು ಆತನು ನೀಡಿದ್ದನು.

## ಆತ್ಮ ವಿಶ್ವಾಸದ ನಂಬಿಕೆ

ಭವಿಷ್ಯವನ್ನು ನಂಬಿಕೆಯಿಂದ ಜೀವಿಸಬೇಕು ಎಂಬ ಕರೆಯೂ ಉಂಟಾಯಿತು. ಅದ್ಭುತವಾದ ಸಂಗತಿಗಳು ಜರುಗುತ್ತಿದ್ದವು, ಆದರೆ ಅಪೊಸ್ತಲರು ಅದರ ಅರ್ಥವನ್ನು ತಿಳಿಯ ಬೇಕಿತ್ತು. ಯೇಸು ಅವರಿಗೆ,

> ನಾನು ಹೋಗಿ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆಂದು ನಿಮಗೆ ಹೇಳಿದ್ದನ್ನು ಕೇಳಿದಿರಿ. ನೀವು ನನ್ನನ್ನು ಪ್ರೀತಿಸುವವರಾಗಿದ್ದರೆ ನಾನು ತಂದೆಯ ಬಳಿಗೆ ಹೋಗುವ ವಿಷಯದಲ್ಲಿ ಸಂತೋಷಪಡುತ್ತಿದ್ದಿರಿ; ಯಾಕಂದರೆ ತಂದೆಯು ನನಗಿಂತ ದೊಡ್ಡವನು. ಅದೆಲ್ಲಾ ನಡೆಯುವಾಗ ನೀವು ನನ್ನನ್ನು ನಂಬುವಂತೆ ಅದು ನಡೆಯುವದಕ್ಕಿಂತ ಮುಂಚೆಯೇ ಈಗ ನಿಮಗೆ ಹೇಳಿದ್ದೇನೆ (ಯೋಹಾನ 14:28, 29).

ಕ್ರಿಸ್ತನ ವಾಕ್ಯಗಳಲ್ಲಿ ನಂಬಿಕೆಯು ಅವಲಂಭಿತವಾಗಿದೆ (ರೋಮಾಪುರ 10:17). ಆತನ ಮಾತುಗಳನ್ನು ಕೇಳುವವರಿಗೆ ಒಪ್ಪುವವರಿಗೆ, ಅದರಲ್ಲಿ ಕ್ರಿಯಾಶೀಲರಾಗಿ, ಭರವಸ ಹಾಗೂ ಪ್ರೀತಿ ಇರುವವರಿಗೆ ಅದು ಲಭಿಸುತ್ತದೆ.

ಅಪೊಸ್ತಲರು ಕ್ರಿಸ್ತನ ಮಾತುಗಳನ್ನು ಅಂಗೀಕರಿಸಿದವರಾಗಿದ್ದರು, ಯೇಸು ಅವರನ್ನು ಬಿಟ್ಟು ಹೋಗುವಾಗಲೂ, ಯೇಸುವಿನಲ್ಲಿ ಅವರು ಆನಂದ ಪಡುವವರಾಗಿದ್ದರು. ದೇವರು ಲೋಕಕ್ಕಾಗಿ ಹೊಂದಿದ್ದ ವಿಶೇಷ ಯೋಜನೆಯಲ್ಲಿ ಆತನು ತನ್ನ ಪ್ರಸನ್ನತೆಯ ಮೂಲಕ ಪ್ರವೇಶಿಸುವನು ಎಂಬ ಭರವಸದಿಂದಿದ್ದರು. ಆತನು ತಂದೆಯ ಬಳಿಗೆ ಹಿಂದಿರುಗುತ್ತಿದ್ದನು. ಆತನು ತಂದೆಯ ಚಿತ್ತವನ್ನು ನೆರವೇರಿಸಿದ ನಂತರ, ನಿತ್ಯವಾದ ಉದ್ದೇಶವನ್ನು ಈಡೇರಿಸಲು ತಂದೆಯ ಬಲಪಾರ್ಶ್ವದಲ್ಲಿ ಕೂತುಕೊಂಡಿದ್ದಾನೆ. ಆತನ ಮಾತಿನ ಮೇರೆಗೆ, ಅಪೊಸ್ತಲರು, ಸಿದ್ಧತೆಗೊಳ್ಳುತ್ತಿದ್ದರು, "ಆತನು ಅವರಿಗೆ," ಅದು ನಡೆಯುವದಕ್ಕಿಂತ ಮುಂಚೆಯೇ ಈಗ ನಿಮಗೆ ಹೇಳಿದ್ದೇನೆ (14:29).

ಯೇಸುವಿನ ಕ್ರೂಜಿಯ ಮರಣವು ಅಪೊಸ್ತಲರಲ್ಲಿ ಭೀತಿಯನ್ನು ಉಂಟು ಮಾಡಿದ್ದವು. ಇಂತಹ ಸಂದರ್ಭದಲ್ಲಿ ಯೇಸು ಅವರಿಗೆ,

> ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳನ್ನಾಡುವದಿಲ್ಲ, ಯಾಕಂದರೆ ಇಹಲೋಕಾಧಿಪತಿಯು ಬರುತ್ತಾನೆ. ಅವನಿಗೆ ಸಮ್ಮಂಧಪಟ್ಟದ್ದು ಯಾವದೊಂದೂ ನನ್ನಲ್ಲಿಲ್ಲ; ಆದರೂ ನಾನು ತಂದೆಯನ್ನು ಪ್ರೀತಿಸುತ್ತೇನೆಂಬದು ಲೋಕಕ್ಕೆ ತಿಳಿದಿರಬೇಕೆಂದು ತಂದೆಯು ನನಗೆ ಕೊಟ್ಟ ಆಜ್ಞೆಯ ಮೇರೆಗೆ ಇದನ್ನು ಮಾಡತ್ತೇನೆ. ಎಳಿರಿ, ಇಲ್ಲಿಂದ ಹೋಗೋಣ (ಯೋಹಾನ 14:30, 31).

ಯೇಸು ಈ ಮಾತುಗಳನ್ನಾಡುವಾಗ - ದುರಾತ್ಮನಿಂದ ಪ್ರೇರಿತನಾದ ಹಾಗೂ "ಲೋಕವನ್ನು ಆಳುವ ಸೈತಾನನು" ಅವರ ಮುಂದೆ ಸೇರಿ ಬಂದಿದ್ದರು. ಆತನ ವಿಚಾರಣೆ, ಶಿಕ್ಷೆ, ಶಿಲುಬೆಯ ಮರಣ ಹತ್ತಿರವಾಗಿತ್ತು.

ಅತಿ ಸಂಕಟದ ಸಮಯವು ಹತ್ತಿರವಾಯಿತು ಎಂದು ಯೇಸು ಅಪೊಸ್ತಲರಿಗೆ ತಿಳಿಸಿದನು. ಆತನು ತನ್ನನ್ನು ಕ್ರೂಜಿಗೆ ಸಮರ್ಪಿಸುವ ಮುಖಾಂತರ, ಈ ಕ್ರೂಜೆಯನ್ನು ಯಜ್ಞದ ವೇದಿಕೆಯನ್ನಾಗಿ ಪರಿವರ್ತಿಸಿದನು. ಆತನು ಲೋಕಕ್ಕಾಗಿ ಯಜ್ಞದ ಕುರಿಯಾದನು ಪಾಪದ ನಿವಾರಣ ಮಾಡಿದನು. ಈ ಕಾರ್ಯದ ಮೂಲಕ ಯೇಸು ತಂದೆಯಲ್ಲಿಟ್ಟಿದ್ದ ಪ್ರೀತಿಯನ್ನು ಸಿದ್ಧಾಂತಪಡಿಸಿದನು. ಆತನು ಈ ಹಿಂದೆ ತಂದೆಯ ಚಿತ್ತಕ್ಕೆ ಒಳಗಾಗಿದ್ದರಿಂದ, ಪುನಃ ಶಿಲುಬೆಗೆ ಅಧೀನನಾದನು. ಆತನು ತಂದೆಯಿಂದ ಹೊಂದಿದ್ದ ಅಪ್ಪಣೆಯನ್ನು ನೆರವೇರಿಸಿದನು.

## ಮುಕ್ತಾಯ

ಗುರುವಾರ ರಾತ್ರಿ ಸಮಯದಲ್ಲಿ, ಯೇಸು ತಿಳಿಸಿದ ಮಾತುಗಳಲ್ಲಿ ಅಪೊಸ್ತಲರಿಗೆ ಸ್ಪಷ್ಟತೆ ಇರಲಿಲ್ಲ, ಆದರೆ ಆತನು ತಿಳಿಸಿದ ಕಾರ್ಯಗಳು ಸಂದಿದ ನಂತರ ಅವರು ಅವುಗಳನ್ನು ನೆನಪಿಸಿ, ತಿಳಿಕೊಂಡು, ನಂಬುವವರಾಗಿದ್ದರು. ಯೇಸು ಮುಂತಿಳಿಸಿದ್ದ ಸಕಲ ವಿಚಾರಗಳು ನೆರವೇರುವ ಹಂತಕ್ಕೆ ತಲುಪಿದ್ದವು.

ಭವಿಷ್ಯವನ್ನು ಯೋಚಿಸುವಾಗ ಗಾಬರಿ ಉಂಟಾಗುತ್ತಿತ್ತು. ಆ ಕಾರ್ಗತಲ ಕತ್ತಲಿನಲ್ಲಿ ಬೀಸುವ ಬಿರುಗಾಳಿಯ ಭವಿಷ್ಯವು ಅವರಿಗೆ ಗೊಂದಲವನ್ನು ಸೃಷ್ಟಿ ಮಾಡಿತ್ತು. ಆದರೆ ಯೇಸು ಮುಂದೆ ಬರಲಿರುವ ಪವಿತ್ರಾತ್ಮನ ಪ್ರಸನ್ನತೆಯನ್ನು ಆತನ ನಡೆಸುವಿಕೆಯನ್ನು ನೋಡ ಬೇಕೆಂದು ತಿಳಿಸಿದನು. ಆತನು ನೀಡುವ ಸಮಾಧಾನವನ್ನು ಆತನ ಮಾತಿನಿಂದ ಉಂಟಾದ ನಂಬಿಕೆಯನ್ನು ನೆನಪಿಸಿದನು. ಆತನು ಅದನ್ನೇ ನಮಗೂ ಮಾಡುತ್ತಾನೆ. ತನ್ನೆಲ್ಲಾ ಶಿಷ್ಯರಿಗೆ, ಪವಿತ್ರಾತ್ಮನ ಮಾರ್ಗದರ್ಶನವನ್ನು ಸಮಾಧಾನದ ಶಾಂತಿಯನ್ನು ವಿಶ್ವಾಸವನ್ನು ಆತನು ದಯಪಾಲಿಸಿರುವನು. ನಾವು ಆತನ ಮಾತನ್ನು ಕೇಳಿ, ಕಲಿತು, ನಂಬಿ ಆತನ ಸಮಾಧಾನವನ್ನು ಸ್ವೀಕರಿಸೋಣ.

---

*ನಾವು ಸತ್ಯವೇದವನ್ನು ತೆರೆದು, ಯೇಸು ಕ್ರಿಸ್ತನು 2 ಸಾವಿರ ವರ್ಷಗಳ ಹಿಂದೆ ಜೀವಿಸಿದ್ದನು ... ಮಾತನಾಡಿದನು ... ಮರಣ ಹೊಂದಿದನು ಎಂದು ಹೇಳುತ್ತೇವೆಯೇ? ಇದು ಸಿದ್ಧಾಂತ ಅಥವಾ ಬರವಣಿಗೆ ಮಾತ್ರವಿರಬಹುದು. ಆದರೆ ನಾವು ಸತ್ಯವೇದವನ್ನು ತೆರೆದು ಯೇಸು ಕ್ರಿಸ್ತನು ಏನಾಗಿದ್ದನು ಎಂಬುದಾಗಿ ಚಿಂತಿಸದೆ, ಆತನು ಈ ದಿನ ಏನಾಗಿದ್ದಾನೆ ಎಂದು ಚಿಂತನೆ ಮಾಡಬೇಕು. ಅದು ದೈವೀಕ ಜೀವನ ಚರಿತ್ರೆಯ ಸುವಾಸನೆಯಾಗಿದೆ. ದೈವೀಕ ದಿನಚರಿಯಿಂದ ತೆಗೆದ ಮೂಲ ಪ್ರತಿಗಳಾಗಿದೆ. ಆತನು ನೆನ್ನೆ ಇದ್ದ ಹಾಗೆ, ಈ ದಿನವೂ ಇರುವನು. ಆತನು ಒಂದು ಸಾವಿರ ವರುಷಗಳನ್ನು ಒಂದು ದಿನದಂತೆ ಪರಿಗಣಿಸುತ್ತಾನೆ; ಅದರಿಂದ, ಅದು ಸ್ವರವನ್ನು ಕೇಳಿ, ಆತನ ಮುಖವನ್ನು ನೋಡಿದ್ದರು. ಸುವಾರ್ತೆಗಳನ್ನು ಓದುವವರಿಗೆ, ಅದು ತಾಜಾತನ ಹೊಂದಿರುವ ದಿನಪತ್ರಿಕೆಯಾಗಿದೆ.*[1]

ಟಿಪ್ಪಣಿ

[1]F. B. Meyer, *The Gospel of the King* (Grand Rapids, Mich.: Baker Book House, 1949), 31-32.